REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 13 | ISSUE - 1 | OCTOBER - 2023

# ಡಾ. ಅಂಬೇಡ್ಕರ್ ಅವರ ಭಾಷಣಗಳಲ್ಲಿ 'ಧರ್ಮ' ಪರಿವರ್ತನಾ ವಿಚಾರಗಳು

ಶ್ರೀಮತಿ ಅರ್ಚನಾ ಕಾಂಬಳೆ
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ.
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

ಮಾರ್ಗದರ್ಶಕರು
ಡಾ॥ ಆಯ್. ಕೆ. ಪತ್ತಾರ
ನಿವೃತ್ತ ಪ್ರಾಧ್ಯಾಪಕರು
ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

**ಸಾರಾಂಶ**

ಡಾ. ಅಂಬೇಡ್ಕರ್ ಅವರು ತಮ್ಮ ಜೀವನದ ಅಂತಿಮ ಘಟ್ಟದಲ್ಲಿ 1956ರ ಅಕ್ಟೋಬರ್ 14ರಂದು ಲಕ್ಷಾಂತರ ಅನುಯಾಯಿಗಳೊಡನೆ ನಾಗಪುರದಲ್ಲಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡರು. ಇವರ ಮತಾಂತರಕ್ಕೆ ಕಾರಣಗಳನ್ನು ತಮ್ಮ ಭಾಷಣಗಳಲ್ಲಿ ಹೇಳಿದ್ದಾರೆ. 1929 ರಿಂದ 1956ರವರೆಗೆ ವಿವಿಧ ಸ್ಥಳಗಳು ಮತ್ತು ಪ್ರಸಂಗಗಳಲ್ಲಿ ಅವರು ಮಾಡಿದ ಭಾಷಣಗಳಲ್ಲಿ ಧರ್ಮಾಂತರಕ್ಕೆ(ಮತಾಂತರ) ಕಾರಣಗಳು ಮತ್ತು ಹಿನ್ನಲೆಯನ್ನು ಅರ್ಥಗರ್ಭಿತವಾಗಿ ತಿಳಿಸಿದ್ದಾರೆ. ಡಾ. ಅಂಬೇಡ್ಕರ್ ಅವರ ಧರ್ಮಾಂತರದ ಹಿನ್ನಲೆ ಮತ್ತು ಬೌದ್ಧ ಧಮ್ಮವನ್ನು ಸ್ವೀಕರಿಸಲು ಕಾರಣಗಳನ್ನು ಈ ಪತ್ರಿಕೆಯಲ್ಲಿ ಚರ್ಚಿಸಲಾಗಿದೆ.



**ಕೀ ವರ್ಡ್‌ಗಳು:** ಡಾ. ಅಂಬೇಡ್ಕರ್, ಬೌದ್ಧ ಮತ, ಧರ್ಮಾಂತರ, ನಾಗಪುರ, ಹಿಂದೂ ಧರ್ಮ, ಮನುಸ್ಮೃತಿ, ವರ್ಣಾಶ್ರಮ ಧರ್ಮ, ಅಸ್ಪೃಶ್ಯತೆ, ಗಾಂಧೀಜಿ, ಚಂದ್ರಮಣಿ ಭಂತೆ. ರಾಜಕೀಯ ಹಕ್ಕುಗಳು

ಡಾ. ಅಂಬೇಡ್ಕರ್ ಅವರು ತಮ್ಮ ಜೀವನದ ಹೋರಾಟದ ನಡುವೆ ಬೌದ್ಧ ಧರ್ಮದಲ್ಲಿ ಆಸಕ್ತಿ ಹೊಂದಿದ್ದರು. ಅವರಿಗೆ ಬುದ್ಧನ ಬಗೆಗಿನ ಅವರ ಪ್ರೀತಿ ವಾತ್ಸಲ್ಯಗಳು ಯಾವ ಮಟ್ಟದಲ್ಲಿದ್ದವೆಂದರೆ ತಮ್ಮ ಮನೆಗೆ ಪ್ರೀತಿಯಿಂದ ಬುದ್ಧನ ಭವ್ಯ ಅರಮನೆ "ರಾಜಗೃಹ" ಎಂಬ ಹೆಸರನ್ನು ಇಟ್ಟರು. "ದಲಿತ ವರ್ಗಗಳಿಗೆ ನಾನು ಸೂಚಿಸಿದ ಧರ್ಮವೆಂದರೆ ಅದು ಬೌದ್ಧ ಧರ್ಮ. ಆ ಧರ್ಮದಲ್ಲಿ ಎಲ್ಲರೂ ಆನಂದವಾಗಿರುತ್ತೀರಿ. ಅದರಲ್ಲಿ ದೇವತೆಗಳ, ಆತ್ಮ, ಪರಮಾತ್ಮಗಳ ಗೋಜಲುಗಳಿಲ್ಲ. ವಿಶ್ವ ಸೋದರತೆ, ಸಮಾನತೆಗಳು ಬೌದ್ಧ ಧರ್ಮದಲ್ಲಿದೆ ಎಂದು ಅಂಬೇಡ್ಕರ್ ಕರೆ ನೀಡಿದರು. ಹಿಂದೂ ಧರ್ಮವು ಅಸಮಾನತೆ, ತಾರತಮ್ಯ ಮತ್ತು ಶೋಷಣೆಗಳಿಂದ ತುಂಬಿರುವ ಚಾತುರ್ವರ್ಣ್ಯದ ಆಧಾರದ ಮೇಲೆ ನಿಂತಿದೆ. ಬೌದ್ಧ ಧರ್ಮವೂ ಭಾರತದ್ದೇ ಆದ ಧರ್ಮವಾಗಿದೆ. ನಾವೆಲ್ಲರೂ ಬೌದ್ಧ ಧರ್ಮೀಯರೇ ಆಗಿದ್ದೆವು ಎಂದು ಅಭಿಪ್ರಾಯಪಟ್ಟರು. 1929ರ ಮೇ 25ರಂದು ಮಹಾರಾಷ್ಟ್ರದ ಜಳಗಾವ್‌ನಲ್ಲಿ ಏರ್ಪಡಿಸಿದ್ದ ಸಾರ್ವಜನಿಕ ಸಭೆಯಲ್ಲಿ ಅಂಬೇಡ್ಕರ್‌ರವರು ಮೊಟ್ಟಮೊದಲ ಬಾರಿಗೆ ಮತಾಂತರದ ಕುರಿತು ಪ್ರಸ್ತಾಪ ಮಾಡಿದರು. ಹಿಂದೂ ಧರ್ಮದಲ್ಲಿ ದಲಿತರ ಮತ್ತು ಶೋಷಿತರನ್ನು ಸಮಾನತೆಯಿಂದ ಕಾಣದಿದ್ದರೆ ಅದನ್ನು ಅವರು ತ್ಯಜಿಸಬೇಕು ಎಂದು ಕರೆಕೊಟ್ಟರು.[1]

1935 ಅಕ್ಟೋಬರ್ 13ನೇ ರಾತ್ರಿ ನಡೆದ ಯೆವೋಲಾ ಸಮ್ಮೇಳನದಲ್ಲಿ ಹಿಂದುತ್ವವನ್ನು ಬ್ರಾಹ್ಮಣತ್ವ ಎಂದು ವಿವರಿಸಿ, ಎಲ್ಲಾ ವರ್ತುಲದಲ್ಲಿ ಅಂದರೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ರಾಜಕೀಯ ವರ್ತುಲಗಳಲ್ಲಿ ನಿಮ್ನವರ್ಗಗಳವರ ಪಡುಪಾಟಲನ್ನು ವಿವರಿಸುತ್ತಾ, ಭಾಷಣದಲ್ಲಿ "ದುರಾದೃಷ್ಟವಶಾತ್ ನಾನು ಒಬ್ಬ ಅಸ್ಪೃಶ್ಯ ಹಿಂದೂವಾಗಿ ಹುಟ್ಟಿದೆ, ಆದರೆ ನಾನು ಹಿಂದೂವಾಗಿ ಸಾಯುವುದಿಲ್ಲ" ಎಂದು ಘೋಷಿಸಿದರು. ಇವರ ಮತಾಂತರ ಭಾಷಣಕ್ಕೆ ಗಾಂಧೀಜಿಯವರು ಮಾಡಿದ ಟೀಕೆಗೆ ಉತ್ತರಿಸಿ "ಅಸಮಾನತೆಯೇ ಹಿಂದೂಧರ್ಮದ ತಳಹದಿಯಾಗಿದ್ದು ಮತ್ತು ಅದರ ನೈತಿಕತೆ ಹೇಗಿದೆಯೆಂದರೆ ನಿಮ್ನವರ್ಗದವರು ಎಂದೆಂದಿಗೂ ಸಂಪೂರ್ಣ ಪುರುಷತ್ವವನ್ನು ಪಡೆದುಕೊಳ್ಳಲಾಗುವುದಿಲ್ಲ. ಧರ್ಮದ ಅವಶ್ಯಕತೆ ಇದೆ ಎಂದು ಗಾಂಧೀಜಿ ಅವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಾನು ತನ್ನ ನಡತೆಯನ್ನು ಹೇಗೆ ನಿಯಂತ್ರಿಸಿಕೊಳ್ಳಬೇಕೆಂದು ಮತ್ತು ಜೀವನದಲ್ಲಿ ಹೇಗೆ ಮುಂದುವರೆಯಬೇಕೆಂಬುದಕ್ಕೆ ಹಾಗೂ ಚೆನ್ನಾಗಿ ಬಾಳುವುದಕ್ಕೆ ಬೇಕಾದ ತನ್ನ ಕಲ್ಪನೆಯ ಧರ್ಮಕ್ಕೆ, ತನ್ನ ಪೂರ್ವಿಕರ ಧರ್ಮ ಅಸಂಗತವಾಗಿದ್ದರೆ, ಅದಕ್ಕೆ ಅವನು ಅಂಟಿಕೊಂಡಿರಬೇಕೆಂಬುದಕ್ಕೆ ನನ್ನ ಸಹಮತವಿಲ್ಲ. ಯಾವಾಗ ಮತಾಂತರಗೊಳ್ಳಬೇಕು ಮತ್ತು ಯಾವ ಧರ್ಮವನ್ನು ಬದಲಾಯಿಸಿಕೊಳ್ಳಬೇಕು ಎಂಬುದರ ಬಗ್ಗೆ ನಿರ್ಧರಿಸಲಾಗಿಲ್ಲ"[2] ಎಂದು ಹೇಳಿ ಸಮರ್ಥನೆ ಮಾಡಿಕೊಂಡಿರುವುದು ಗಮನಾರ್ಹವಾಗಿದೆ.

ನಾಸಿಕ್‌ನ ಆಧುನಿಕ ದೃಷ್ಟಿಕೋನದ ಹಿಂದೂಗಳ ಸಂಘವು ನಡೆಸಿದ ಸಂದರ್ಶನದಲ್ಲಿ ಅಂಬೇಡ್ಕರ್ ಹೀಗೆ ಹೇಳಿದರು, "ಹಿಂದೂ ಧರ್ಮವು 'ಪರಿಪೂರ್ಣ ಬ್ರಹ್ಮ' ಎಂಬ ಕಲ್ಪನೆಯ ಮೇಲೆ ಅವಲಂಭಿತವಾಗಿದೆ. ಆದರೆ ಇಡೀ ಹಿಂದೂಗಳ ಆಚರಣೆಗಳು 'ಮನುಸ್ಮೃತಿ'ಯ ತತ್ವಗಳ ಮೇಲೆ ಅವಲಂಬಿತವಾಗಿವೆ. ಅದು ಕೇವಲ ಅಸಮಾನತೆಯನ್ನೇ ಭೋಧಿಸುತ್ತದೆ. ಕೆಲ ಜನರು ಧರ್ಮವು ಸಮಾಜಕ್ಕೆ ಅವಶ್ಯಕ ಎಂಬುದನ್ನು ಒಪ್ಪುವುದಿಲ್ಲ. ಅವರ ಅಭಿಪ್ರಾಯವನ್ನು ಪುರಷ್ಕರಿಸುವುದಿಲ್ಲ. ಸಮಾಜದಲ್ಲಿನ ಜೀವನ ಆಚರಣೆಗಳು ಧರ್ಮದ ಅಡಿಪಾಯವಾಗಿರಬೇಕು. ಹಿಂದೂ ಸಮಾಜವು ತನ್ನ ವ್ಯವಸ್ಥೆಯ ತಳಪಾಯವಾಗಿ ಮನುಸ್ಮೃತಿಯು ಹೇಳುವ ಧರ್ಮವನ್ನು ಇಟ್ಟುಕೊಂಡಿದೆ.[3] ಇನ್ನು ಹಿಂದೂ ಧರ್ಮವನ್ನು ತ್ಯಜಿಸುತ್ತಿರುವುದನ್ನು ಕುರಿತು ಅಂಬೇಡ್ಕರ್ ಅವರು ಈ ರೀತಿ ಘೋಷಿಸಿದರು. ವೈಯಕ್ತಿಕವಾಗಿ ನನ್ನ ಧರ್ಮವನ್ನು ಬದಲಿಸುವ ಬಗ್ಗೆ ನಾನು ನಿರ್ಧಾರ ಕೈಗೊಂಡಾಗಿದೆ. ಆದರೆ ಬೇರೆ ಯಾವ ಧರ್ಮಕ್ಕೆ ನಾನು ಸೇರ್ಪಡೆ ಆಗುತ್ತಿದ್ದೇನೆ ಎಂದು ಹೇಳುವ ಪರಿಸ್ಥಿತಿಯಲ್ಲಿ ಇಂದು ನಾನಿಲ್ಲ. ಆದರೆ ಈ ರೀತಿಯ ಧರ್ಮದ ಬದಲಾವಣೆಯನ್ನು ನಾನು ಯಾವುದೇ ವೈಯಕ್ತಿಕ ಲಾಭಕ್ಕಾಗಿ ಮಾಡುತ್ತಿಲ್ಲ. ನಾನು ನನ್ನೊಂದಿಗೆ ಇಡೀ ಅಸ್ಪೃಶ್ಯ ಸಮಾಜವನ್ನೇ ಕೊಂಡೊಯ್ಯುತ್ತಿದ್ದೇನೆ. ಏನೇ ಆದರೂ, ಬಹುಸಂಖ್ಯೆಯ ಅಸ್ಪೃಶ್ಯರನ್ನು ನನ್ನ ಜೊತೆ ಕೊಂಡೊಯ್ಯುತ್ತೇನೆ. ಒಬ್ಬರು ಒಂದು ಧರ್ಮಕ್ಕೆ ಸೇರ್ಪಡೆ ಆಗುವುದು ಮತ್ತೊಬ್ಬರು ಮತ್ತೊಂದು ಧರ್ಮಕ್ಕೆ ಸೇರ್ಪಡೆ ಆಗುವುದು ನನಗೆ ಇಷ್ಟವಿಲ್ಲ. ನನ್ನ ಈ ಧರ್ಮಾಂತರದ ಹೋರಾಟವು ಇಡೀ ಭಾರತಕ್ಕೆ ಅನ್ವಯಿಸಬೇಕು ಎಂಬುದೇ ನನ್ನ ಇಚ್ಛೆ. ಒಂದು ವೇಳೆ ನನ್ನ ಸಹ ಧರ್ಮಿಯರು ನನ್ನೊಂದಿಗೆ ಸೇರ್ಪಡೆಯಾಗದೇ ಹೋದರೆ, ನಾನೊಬ್ಬನೇ ಏಕಾಂಗಿಯಾಗಿ ಧರ್ಮವನ್ನು ಬದಲಿಸುವೆ"[4] ಎಂದು ಹೇಳಿದರು.

1936ರ ಮೇ 31ರಂದು ಅಖಿಲ ಮುಂಬೈ ಪ್ರದೇಶ ಮಹಾರ್ ಸಮಾವೇಶದಲ್ಲಿ ಭಾಷಣ ಮಾಡುತ್ತಾ "ಪೂರ್ವಜರ ಧರ್ಮಕ್ಕೆ ಅಂಟಿಕೊಂಡು ಕುಳಿತಿರುವುದರಲ್ಲಿ ಅರ್ಥವಿಲ್ಲ. ಸುಳ್ಳು ಅಭಿಮಾನದಲ್ಲಿ ಯಾವುದೇ ಅರ್ಥವೂ ಇಲ್ಲ. ಉಪಯುಕ್ತತೆಯೂ ಇಲ್ಲ. ಹಿಂದೂ ಧರ್ಮದಲ್ಲಿರುವ ಅಪಾಯಕಾರಿ ಚಾತುರ್ವರ್ಣ್ಯ ವ್ಯವಸ್ಥೆ ನಶಿಸಿಹೋಗುವ ಚಿಹ್ನೆಯೂ ಕಾಣುತ್ತಿಲ್ಲ. ವರ್ಣಾಶ್ರಮ ವ್ಯವಸ್ಥೆಯ ಕಾರಣ ಬ್ರಾಹ್ಮಣರು ಹೊರತುಪಡಿಸಿ ಬೇರೆಯವರು ವಿದ್ಯೆ ಪಡೆಯುವಂತಿಲ್ಲ. ಕ್ಷತ್ರಿಯರನ್ನು ಬಿಟ್ಟು ಬೇರೆಯವರು ಶಸ್ತ್ರ ಹಿಡಿಯುವಂತಿಲ್ಲ. ಇಂತಹ ವ್ಯವಸ್ಥೆ ನಮ್ಮ ಪೂರ್ವಜರನ್ನು ಅಜ್ಞಾನಿ ಮತ್ತು ನಿರ್ಬಲರನ್ನಾಗಿಸಲಾಯಿತು. ವರ್ಣಾಶ್ರಮ ಧರ್ಮ ನಮಗೆ ಜ್ಞಾನ, ಅಧಿಕಾರ ಮತ್ತು ಸಂಪತ್ತು ಗಳಿಕೆಗೆ ಅವಕಾಶ ನೀಡಲಿಲ್ಲ. ಇದೇ ವರ್ಣಾಶ್ರಮ ಧರ್ಮ ನಮ್ಮ ಪೂರ್ವಿಕರ ಪ್ರತಿರೋಧ ಶಕ್ತಿ ಇಲ್ಲವಾಗಿಸಿ ಪ್ರಗತಿ ಪಥದತ್ತ ಅವರು ಹೆಜ್ಜೆ ಹಾಕುವುದನ್ನು ನಿರ್ಬಂಧಿಸಿತು. ಆದರೆ ಇಂದು ನಮ್ಮ ಸ್ಥಿತಿ ಹಾಗಿಲ್ಲ. ಇತ್ತೀಚಿಗಂತೂ ಎಲ್ಲರಿಗೂ ಶಿಕ್ಷಣ ಮುಕ್ತವಾಗಿದೆ. ಶಸ್ತ್ರ ಹಿಡಿಯಬೇಕೆನ್ನುವವರಿಗೆ ಮಾರ್ಗ ಮುಕ್ತಗೊಳಿಸಲಾಗಿದೆ. ಪ್ರಗತಿಯ ಪಥ ಮುಕ್ತವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪೂರ್ವಿಕರ ಧರ್ಮಕ್ಕೆ ಅಂಟಿಕೊಂಡು ಕುಳಿತರೆ ನಿಮ್ಮ ಉದ್ಧಾರ ಎಂದಿಗೂ ಆಗುವುದಿಲ್ಲ. ಜ್ಞಾನ ಮತ್ತು ಸಾಮರ್ಥ್ಯ ಬೆಳೆಸಿಕೊಂಡು ಮೂಢನಂಬಿಕೆಗಳನ್ನು ಮುರಿದು ಸರ್ವಾಂಗೀಣ ಪ್ರಗತಿಯತ್ತ ಹೆಜ್ಜೆ ಹಾಕಿ ಎಂದು ಸ್ಪಷ್ಟವಾಗಿ ಹೇಳುತ್ತೇನೆ".[5] ಕೆಲವೇ ದಿನಗಳ ಹಿಂದೆಯಷ್ಟೇ ಸ್ಪೃಶ್ಯ ಹಿಂದೂಗಳು ಜೋಧಪುರ ಮತ್ತು ಗುಜರಾತ್‌ನಲ್ಲಿ ಅಸ್ಪೃಶ್ಯರ ಮೇಲೆ ನಿರಂತರವಾಗಿ ಅತ್ಯಾಚಾರ ಎಸಗಿದ್ದಾರೆ. ಈ ಅತ್ಯಾಚಾರಿಗಳ ಗುಲಾಮಗಿರಿ ನಿರ್ಮೂಲನೆ ಮಾಡಬೇಕೆಂದರೆ ಧರ್ಮಾಂತರ ಮಾಡದೇ ಗತ್ಯಂತರವಿಲ್ಲ. ಹಿಂದೂಗಳಿಗೆ ಸ್ವಾಯತ್ತ ಸ್ಥಾನಮಾನವನ್ನು ಬ್ರಿಟಿಷರು ನೀಡಿದರೂ ಬ್ರಿಟಿಷರ ರಾಜ್ಯದಲ್ಲಿ ಇರುವುದು ಅವರಿಗೆ ಬೇಕಿಲ್ಲ. ಹಾಗಿದ್ದಾಗ ನಾವೇಕೆ ಹಿಂದೂಗಳ ರಾಜ್ಯದಲ್ಲಿ ಇರಬೇಕು? ಒಂದು ಮರದ ಕೆಳಗೆ ಇನ್ನೊಂದು ಗಿಡ ಬೆಳೆಯಲು ಸಾಧ್ಯವಿಲ್ಲ. ಜೀರ್ಣಾವಸ್ಥೆಯ ವೃಕ್ಷವಾಗಿರುವ ಹಿಂದೂ ಧರ್ಮದಡಿ ನಮ್ಮ ಬೆಳವಣಿಗೆ ಸಾಧ್ಯವಿಲ್ಲ. ಆದ್ದರಿಂದ ನಾವು ಧರ್ಮಾಂತರಕ್ಕೆ ಸಿದ್ಧವಾಗಬೇಕಿದೆ.[6]

ಅಂಬೇಡ್ಕರ್ ಅವರು ಅಮರಾವತಿಯ ಶ್ರೀ ಜಮನಾಲಾಲ್ ಬಜಾಜ್ ಅವರ ಮಾಲಿಕತ್ವದ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನವನ್ನು ಅಸ್ಪೃಶ್ಯರಿಗೆ ಮುಕ್ತಗೊಳಿಸಿದ್ದು ಅದನ್ನು ವೀಕ್ಷಿಸಲು ಬಂದಿದ್ದರು. ದೇವಾಲಯ ಪ್ರವೇಶಿಸಿ ಹೊರಗೆ ಬಂದ ಬಳಿಕ ಅವರಿಗೆ ಅನ್ನಿಸಿದ್ದನ್ನು ಭಾಷಣದಲ್ಲಿ ಹೀಗೆ ಹೇಳಿದರು. "ನನ್ನ ಅಸ್ಪೃಶ್ಯತೆ ಹೇಗಿದೆಯೊ ಹಾಗೇ ಇದೆ. ಅದಿನ್ನು ಹೋಗೇ ಇಲ್ಲ. ದೇವಸ್ಥಾನದೊಳಗೆ ಹೋದಾಗ ಸಿಗಬೇಕಾದ ಹೂ ಮತ್ತು ತೀರ್ಥ ಕೂಡ ನಮಗೆ ಲಭಿಸುವುದಿಲ್ಲ ಎಂದ ಮೇಲೆ ದೇವಸ್ಥಾನಕ್ಕೆ

ಹೋದರೂ ಅಸ್ಪೃಶ್ಯತೆ ನಿರ್ಮೂಲನೆಯಾಗಲಿಲ್ಲ. ಇರಲಿ...... ಈ ಹಿಂದೆ ದೇವಸ್ಥಾನ ಪ್ರವೇಶಕ್ಕೆ ಆಗ್ರಹಿಸಿ ಮಾಡುತ್ತಿದ್ದ ಸತ್ಯಾಗ್ರಹದಲ್ಲಿ ಎಷ್ಟು ಅನಂದ ಸಿಗುತ್ತಿತ್ತೋ ಅಷ್ಟೇ ತಿರಸ್ಕಾರ ಭಾವನೆ ಈಗ ದೇವಸ್ಥಾನಗಳತ್ತ ಬೆಳೆಯುತ್ತಿದೆ. ನಾವು ಧರ್ಮಾಂತರ ಘೋಷಣೆ ಮಾಡಿದ ಬಳಿಕ ಹಿಂದೂಗಳಿಗೆ ನಾವು ಸಹೋದರರಾಗಿ ಕಾಣಿಸುತ್ತಿದ್ದೇವೆ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಒಂದು ವೇಳೆ ಹಿಂದೂ ಧರ್ಮ ನಮ್ಮನ್ನು ಹಿಂದೂ ಎಂದು ಹೇಳುವುದಕ್ಕೆ ಸಿದ್ಧವಿಲ್ಲ ಎಂದ ಮೇಲೆ ನಾವೇಕೆ ಹಿಂದೂ ಎಂದು ಕರೆದುಕೊಳ್ಳಬೇಕು? ಯಾವ ಧರ್ಮದಲ್ಲಿ ಸಮಾನತೆ, ಪ್ರೀತಿ ಮತ್ತು ಬಂದುತ್ವವಿಲ್ಲವೋ ಅಂತಹ ಧರ್ಮವನ್ನು ಧರ್ಮ ಎಂದು ನಾನು ಕರೆಯುವುದಕ್ಕೆ ಸಿದ್ಧವಿಲ್ಲ. ಎರಡು ಸಾವಿರ ವರ್ಷಗಳ ಹಿಂದೆ ನಮ್ಮ ಪೂರ್ವಿಕರು ಅಜ್ಞಾನಿಗಳಾಗಿದ್ದರು. ಅವರಿಗೆ ಯಾವುದೇ ವಿದ್ಯೆ ಸಂಪಾದಿಸುವ ಅಥವಾ ಶಸ್ತ್ರ ಹಿಡಿಯುವುದಕ್ಕೆ ಪರವಾನಗಿ ಇರಲಿಲ್ಲ. ಆದ್ದರಿಂದಲೇ ಅವರಿಗೆ ಯಾವುದೇ ಹೊಸ ಕೆಲಸಗಳನ್ನು ಮಾಡುವ ಧೈರ್ಯ ಇರಲಿಲ್ಲ. ಅಜ್ಞಾನದಿಂದಾಗಿ ಅವರ ಮನಸ್ಸು ನಿಸ್ಸತ್ವಗೊಂಡಿತ್ತು. ನಾಲ್ಕು ವರ್ಣಗಳಲ್ಲಿ ಹಿಂದೂ ಧರ್ಮವನ್ನು ಕಟ್ಟಿ ಹಾಕಲಾಗಿದೆ. ನಮ್ಮ ಅರ್ಹತೆ ಬ್ರಾಹ್ಮಣರಿಗಿಂತ ಶ್ರೇಷ್ಠವಾಗಿದ್ದರೂ ಗುಲಾಮಗಿರಿಯ ಕೆಲಸಗಳನ್ನು ನಮಗೆ ನೀಡಲಾಗಿದೆ. ಈ ಗುಲಾಮಗಿರಿಯಿಂದಾಗಿಯೇ ನಮ್ಮ ಪೂರ್ವಿಕರು ಸ್ವಾಭಿಮಾನ ಮರೆತುಬಿಟ್ಟರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಈಗ ನಾವು ಹಿಂದೂ ಧರ್ಮದ ಅನಾದರದ ಚೌಕಟ್ಟಿನಲ್ಲಿ ಇರುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾವು ಧರ್ಮಾಂತರದ ಘೋಷಣೆ ಮಾಡಬೇಕಾಯಿತು.[7]

ಈ ಸಂದರ್ಭದಲ್ಲಿ ನಿಮ್ಮ ಪೂರ್ವಿಕರನ್ನು ಗುಲಾಮಗಿರಿಯ ಹೀನ ಸ್ಥಿತಿಯಲ್ಲಿ ಇರಿಸಿದ ಆ ಧರ್ಮ, ಯಾವುದೇ ಪರಿಸ್ಥಿತಿಯನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಈ ಧರ್ಮ ನಿಮ್ಮನ್ನು ಅಜ್ಞಾನದಲ್ಲಿ, ದಾರಿದ್ರ್ಯದಲ್ಲಿ ನರಳುವಂತೆ ಮಾಡಿದ ಈ ಹಿಂದೂ ಧರ್ಮದ ಬಗ್ಗೆ ನಾವೇಕೆ ಚಿಂತೆ ಮಾಡಬೇಕು? ನಿಮ್ಮ ಪೂರ್ವಿಕರಂತೆ ನೀವೂ ಧರ್ಮದಲ್ಲಿ ಮುಂದುವರೆಯಬೇಕೆಂದರೆ ನಿಮ್ಮನ್ನು ಕೇಳುವವರು ಯಾರೂ ಇಲ್ಲ. ನಿಮ್ಮ ಬಗ್ಗೆ ಚಿಂತೆ ಮಾಡುವವರು ಯಾರೂ ಇರುವುದಿಲ್ಲ. ಧರ್ಮಾಂತರದ ಪ್ರಶ್ನೆ ಏಕೆ ಇಷ್ಟು ಮಹತ್ವ ಪಡೆದಿದೆ ಎಂದರೇ ಇದೇ ಕಾರಣಕ್ಕೆ. ಹಿಂದೂ ಧರ್ಮದಲ್ಲಿ ನೀವು ಉಳಿದುಕೊಂಡರೆ ನಿಮಗೆ ಗುಲಾಮನ ದರ್ಜೆಗಿಂತ ಹೆಚ್ಚಿನ ಸ್ಥಾನಮಾನ ಲಭ್ಯವಾಗದು. ನಾನು ಅಸ್ಪೃಶ್ಯನಾಗಿದ್ದರೂ ಹಿಂದೂ ಧರ್ಮದಲ್ಲಿ ಯಾವುದೇ ವ್ಯಕ್ತಿ ಮಾಡುವಂತಹ ಕೆಲಸ ನಾನು ಮಾಡಬಲ್ಲೆ. ನನ್ನ ಹಿತಾಸಕ್ತಿ ಹಿಂದೂ ಧರ್ಮದಲ್ಲಿ ಇದೆಯೋ ಅಥವಾ ಇಲ್ಲವೋ ಎನ್ನುವುದರಿಂದ ಪರಿಹಾರವಾಗದು. ಇಂದಿನ ನನ್ನ ಪರಿಸ್ಥಿತಿಯಲ್ಲಿ ನಾನು ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಅಗಬಲ್ಲೆ. ಕಾನೂನು ಮಂಡಳಿಯಲ್ಲಿ ಸಚಿವ ಸ್ಥಾನ ಪಡೆಯುವ ಸಾಮರ್ಥ್ಯ ನನಗೆ ಇದೆ. ಆದರೆ ನಿಮ್ಮ ಸ್ವಾಭಿಮಾನದ ರಕ್ಷಣೆಗಾಗಿ ನಾನು ಧರ್ಮಾಂತರ ಮಾಡುವವನಿದ್ದೇನೆ. ಮಣ್ಣು ಪಾಲಾದ ಜೀವನಕ್ಕೆ ಬಂಗಾರದ ಮೌಲ್ಯ ಬರಬೇಕೆಂದರೆ ಧರ್ಮಾಂತರ ಅವಶ್ಯವೆಂದು ನನಗೆ ಭಾಷವಾಗುತ್ತದೆ.[8]

1936ರ ಜೂನ್ 18ರ ರಾತ್ರಿ ತಮ್ಮ ಸ್ನೇಹಿತರ ಸಮ್ಮುಖದಲ್ಲಿ ಡಾ. ಮೂಂಜೆ ಅವರೊಂದಿಗೆ ತಮ್ಮ ಸ್ವಗೃಹ 'ರಾಜಗೃಹ'ದಲ್ಲಿ ಮಾತುಕತೆ ನಡೆಸುತ್ತಾ ಮತಾಂತರಕ್ಕೆ ಕಾರಣವಾದ ಅಂಶಗಳ ಹೇಳಿಕೆಯು ಈ ರೀತಿ ಇದೆ "ಶೋಷಿತ ವರ್ಗದ ಜನರ ಮತಾಂತರಕ್ಕೆ ಮುಂದಿರುವ ಆಯ್ಕೆಗಳು ಮೂರು ಧರ್ಮಗಳು. ಅವುಗಳೆಂದರೆ 1) ಇಸ್ಲಾಂ ಧರ್ಮ 2) ಕ್ರೈಸ್ತ ಧರ್ಮ 3) ಸಿಖ್ ಧರ್ಮ. ಈ ಮೂರು ಧರ್ಮಗಳನ್ನು ಪರಸ್ಪರ ಹೋಲಿಸಿದರೆ ಶೋಷಿತ ವರ್ಗದ ಜನರಿಗೆ ಅಗತ್ಯ ಇರುವುದನ್ನೆಲ್ಲಾ ನೀಡುವುದು ಇಸ್ಲಾಂ ಧರ್ಮ. ಇನ್ನು ಆರ್ಥಿಕವಾಗಿ ಕೂಡ ಇಸ್ಲಾಂ ಧರ್ಮ ಅತ್ಯಂತ ಸುಭದ್ರವಾಗಿದೆ. ಸಾಮಾಜಿಕ ದೃಷ್ಟಿಯಿಂದ ನೋಡಿದರೆ ಮುಸಲ್ಮಾನರು ಭಾರತದಾದ್ಯಂತ ಹರಡಿಕೊಂಡಿದ್ದಾರೆ. ಪ್ರತಿಯೊಂದು ಪ್ರಾಂತದಲ್ಲಿಯೂ ಮಹಮದೀಯರು ಇದ್ದಾರೆ. ಅವರು ಹೊಸದಾಗಿ ತಮ್ಮ ಧರ್ಮಕ್ಕೆ ಸೇರ್ಪಡೆ ಆಗಿರುವ ಶೋಷಿತ ವರ್ಗದ ಜನರು ತಾವು ಅಪೇಕ್ಷಿಸುತ್ತಿರುವ ಹಕ್ಕುಗಳನ್ನೆಲ್ಲಾ ಪಡೆದುಕೊಳ್ಳುತ್ತಾರೆ. ಇಸ್ಲಾಂ ಧರ್ಮಕ್ಕೆ ಸೇರ್ಪಡೆ ಆಗುವುದರಿಂದ ರಾಜಕೀಯ ಹಕ್ಕುಗಳನ್ನು ಇವರು ಕಳೆದುಕೊಳ್ಳುವುದಿಲ್ಲ. ಬದಲಾಗಿ ಎಲ್ಲಾ ಹಕ್ಕುಗಳನ್ನೂ ಇವರು ಪಡೆಯುತ್ತಾರೆ. ಕ್ರೈಸ್ತ ಧರ್ಮವು ಕೂಡ ಅಷ್ಟೇ ಆಸಕ್ತಿಕರವಾಗಿದೆ. ಭಾರತೀಯ ಕ್ರೈಸ್ತರು ಮತಾಂತರಗೊಂಡವರಿಗೆ ಹಣ ಸಹಾಯ ಮಾಡಲು ಆಶಕ್ತರಾಗಿರಬಹುದು. ಅವರು ಮತಾಂತರ ಹೊಂದುತ್ತಾರೆ ಎಂಬುದು ತಿಳಿದುಬಂದರೆ ಅಮೇರಿಕಾ ಹಾಗೂ ಇಂಗ್ಲೆಂಡ್ ಮುಂತಾದ ಆರ್ಥಿಕ ಸದೃಢ ದೇಶಗಳು ಮುಂದೆ ಬಂದು ಅಗತ್ಯವಿರುವ ಹಣವನ್ನು ಪೂರೈಸುತ್ತವೆ. ಮುಸಲ್ಮಾನರಿಗೆ ಇರುವಂತೆ ಭಾರತೀಯ ಕ್ರೈಸ್ತರಿಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ವಿಶೇಷ ಮೀಸಲಾತಿ ಇರುತ್ತದೆ. ಇನ್ನು ಕ್ರೈಸ್ತ ಧರ್ಮ ಹಾಗೂ ಇಸ್ಲಾಂ ಧರ್ಮಕ್ಕೆ ಹೋಲಿಸಿದರೆ ಸಿಖ್ ಧರ್ಮವು ಅಷ್ಟೊಂದು ಆಕರ್ಷಕವಾಗಿಲ್ಲ. ಕೇವಲ ಈ ಧರ್ಮದಲ್ಲಿ 40 ಲಕ್ಷ ಜನರು ಮಾತ್ರವೇ ಇರುವುದರಿಂದ ಶೋಷಿತರಿಗೆ ಯಾವುದೇ ರೀತಿಯ ಆರ್ಥಿಕ ಸಹಾಯ ದೊರೆಯುವುದು ಸಾಧ್ಯವಿಲ್ಲ. ಇನ್ನು ಅವರು ಕೇಂದ್ರೀಕೃತವಾಗಿರುವುದು ಪಂಜಾಬ್ ರಾಜ್ಯದಲ್ಲಿ ಮಾತ್ರವೇ ಆದರಿಂದ ಇವರಿಗೆ ಸಾಮಾಜಿಕವಾಗಿ ಯಾವುದೇ ರೀತಿಯ ಬೆಂಬಲ ದೊರೆಯುವ ಸಾಧ್ಯತೆಗಳು ಕಡಿಮೆ. ಇನ್ನು ರಾಜಕೀಯವಾಗಿ ಈ ಪಂಗಡಕ್ಕೆ ಸೇರ್ಪಡೆಯಾಗುವುದು ಅಂತಹ ಲಾಭಕರವಲ್ಲ. ಪಂಜಾಬ್ ರಾಜ್ಯದ ಹೊರಗೆ ಬಂದರೆ ಇವರಿಗೆ ಯವುದೇ ವಿಶೇಷ ಪ್ರಾತಿನಿಧ್ಯ ದೊರೆಯುವುದಿಲ್ಲ. ಇನ್ನು ಹಿಂದೂಗಳ ದೃಷ್ಟಿಯಿಂದ ನೋಡಿದರೆ ಈ ಮೂರು ಧರ್ಮಗಳಲ್ಲಿ ಯಾವುದಕ್ಕೆ ಸೇರ್ಪಡೆ ಆಗುವುದು ಸೂಕ್ತವೆಂದು ಎನಿಸುತ್ತದೆ? ಇಸ್ಲಾಂ ಧರ್ಮವೋ, ಕ್ರೈಸ್ತ ಧರ್ಮವೋ ಇಲ್ಲ ಸಿಖ್ ಧರ್ಮವೋ? ಸಿಖ್ ಧರ್ಮವೇ ಅತ್ಯಂತ ಸೂಕ್ತ. ಒಂದು ವೇಳೆ ಶೋಷಿತ ವರ್ಗದವರು ಇಸ್ಲಾಂ ಧರ್ಮ ಇಲ್ಲವೇ ಕ್ರೈಸ್ತ ಧರ್ಮಕ್ಕೆ ಸೇರ್ಪಡೆಯಾದರೆ, ಅವರು ಈ ಹಿಂದೂ ಧರ್ಮದಿಂದ ಹೊರಹೋಗುವುದು ಮಾತ್ರವಲ್ಲ ಹಿಂದೂ

ಸಂಸ್ಕೃತಿಯಿಂದಲೇ ದೂರ ಹೋಗುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಸಿಖ್‌ಧರ್ಮಕ್ಕೆ ಸೇರ್ಪಡೆಯಾದರೆ, ಅವರೊಂದಿಗೆ ಹಿಂದೂ ಸಂಸ್ಕೃತಿ ಉಳಿದುಕೊಳ್ಳುತ್ತದೆ.[9]

"ಧರ್ಮಾಂತರ ಚಳುವಳಿ ಕೈಗೆತ್ತಿಗೊಂಡಾಗಿನಿಂದ ಹಲವಾರು ಜನರು ಈ ಚಳುವಳಿ ವಿರುದ್ಧ ಆಪೇಕ್ಷಗಳನ್ನು ಎತ್ತಿದ್ದಾರೆ. ಇಂದು ಹಿಂದೂ ಧರ್ಮವನ್ನು ಧಿಕ್ಕರಿಸಿ ಬೇರೆ ಧರ್ಮವನ್ನು ಸ್ವೀಕರಿಸಲು ಹೊರಟ್ಟಿದ್ದೀರಿ. ಇಲ್ಲಿಯವರೆಗೆ ನಿಮ್ಮ ಪೂರ್ವಿಕರು ಹಿಂದೂ ಧರ್ಮದಲ್ಲಿ ಇದ್ದವರು ಅವರೇನು ಮೂರ್ಖರಿದ್ದರೇ? ಎಂದು ಕೆಲವು ಜಾಣರು ಕೇಳುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಅವರ ಆಕ್ಷೇಪದಲ್ಲಿ ತಥ್ಯ ಇಲ್ಲವೇ ಇಲ್ಲ. ಪೂರ್ವಿಕರು ಎಂದುಕೊಂಡು ಅದಕ್ಕೆ ಅಂಟಿಕೊಂಡು ಕುಳಿತುಕೊಳ್ಳುವುದು ಮೂರ್ಖನಿಗೆ ಮಾತ್ರ ಶೋಭಿಸುವಂತಹದ್ದು. ಯಾವುದೇ ಬುದ್ದಿವಂತ ವ್ಯಕ್ತಿ ಇಂತಹ ಹೇಳಿಕೆಗಳನ್ನು ನೀಡಲು ಸಾಧ್ಯವಿಲ್ಲ. ಪೂರ್ವಿಕರ ಧರ್ಮ ಎಂದ ಕಾರಣಕ್ಕೆ ಧರ್ಮಾಂತರ ಮಾಡಬಾರದು ಎಂದು ಹೇಳುವ ಜನರು ಇತಿಹಾಸ ಓದಿಲ್ಲ ಎಂದು ಹೇಳಬೇಕಾಗುತ್ತದೆ. ಪ್ರಾಚೀನ ಆರ್ಯ ಧರ್ಮ, ವೈದಿಕ ಧರ್ಮ ಎಂದೂ ಕರೆಸಿಕೊಳ್ಳುವ ಆ ಧರ್ಮದಲ್ಲಿ ಗೋಮಾಂಸ ಭಕ್ಷಣೆ, ಸೋಮರಸ ಸೇವೆ ಮತ್ತು ಸ್ವೇಚ್ಛೆಯ ಜೀವನದಂತಹ ಮೂರು ಸಂಗತಿಗಳಿದ್ದವು. ಸಾವಿರಾರು ವರ್ಷಗಳಿಂದ ಆ ಧರ್ಮವನ್ನು ಭಾರತೀಯರು ಪಾಲಿಸಿದ್ದಾರೆ ಮತ್ತು ಇಂದಿಗೂ ಕೆಲವು ಬ್ರಾಹ್ಮಣರಿಗೆ ವೈದಿಕ ಧರ್ಮಕ್ಕೆ ಮರಳುವ ಹುಕಿ ಆಗಾಗ ಬರುತ್ತಿರುತ್ತದೆ. ಪೂರ್ವಿಕರ ಧರ್ಮ ಮಾತ್ರ ಪಾಲಿಸಬೇಕು ಎಂದಿದ್ದಕ್ಕೆ ಜನರು ವೈದಿಕ ಧರ್ಮ ಬಿಟ್ಟು ಬೌದ್ಧ ಧರ್ಮ ಏಕೆ ಸ್ವೀಕರಿಸಿದರು. ವೈದಿಕ ಧರ್ಮ ಬಿಟ್ಟು ಜೈನ ಧರ್ಮ ಏಕೆ ಸ್ವೀಕರಿಸಿದರು. ಈ ಧರ್ಮವನ್ನು ನಮ್ಮ ಪೂರ್ವಜರು ಪಾಲಿಸಿಕೊಂಡು ಬಂದಿದ್ದರು ಎನ್ನುವುದು ನಿಜ. ಆದರೆ ಅವರು ಸ್ವಸಂತೋಷದಿಂದ ಇಲ್ಲವೇ ಖುಷಿಯಿಂದ ಇದ್ದರು ಎಂದು ಹೇಳಲಿಕ್ಕೆ ಆಗದು. ಈ ದೇಶದಲ್ಲಿ ಸುದೀರ್ಘ ಕಾಲದಿಂದ ಚಾತುರ್ವರ್ಣ್ಯ ವ್ಯವಸ್ಥೆ ನಡೆದುಕೊಂಡು ಬಂದಿದೆ. ಚಾತುರ್ವರ್ಣದಲ್ಲಿ ಬ್ರಾಹ್ಮಣರಿಗೆ ವಿದ್ಯೆ, ಕ್ಷತ್ರಿಯರಿಗೆ ಶಸ್ತ್ರ, ವೈಶ್ಯರಿಗೆ ವ್ಯಾಪಾರ, ಕೃಷಿ ಇದ್ದರೆ ಶೂದ್ರರು ಈ ಎಲ್ಲ ವರ್ಗಗಳ ಸೇವೆಗಳನ್ನು ಮಾಡಬೇಕೆಂದು ಕಟ್ಟುಪಾಡು ಹಾಕಲಾಗಿತ್ತು. ಶೂದ್ರರ ಬಳಿ ವಿದ್ಯೆ ಇರಲಿಲ್ಲ. ಅನ್ನವೂ ಇರಲಿಲ್ಲ. ಅಸ್ತ್ರ ಶಸ್ತ್ರಗಳೂ ಇರಲಿಲ್ಲ. ಇಂತಹ ಕ್ಲಿಷ್ಟಕರ ಮತ್ತು ನಿಶಸ್ತ್ರ ಸ್ಥಿತಿಯಲ್ಲಿ ನಿಮ್ಮ ಪೂರ್ವಿಕರು ಇರಬೇಕಾದ ಪರಿಸ್ಥಿತಿ ಇತ್ತು".[10]

"ಧರ್ಮಾಂತರವನ್ನು ಎರಡು ದೃಷ್ಟಿಕೋನದಿಂದ ನೋಡಬೇಕಾಗಿದೆ. ಸಾಮಾಜಿಕ ಮತ್ತು ಧಾರ್ಮಿಕ ದೃಷ್ಟಿಕೋನದಿಂದ ಚಿಂತನೆ ಮಾಡುವ ರೀತಿಯಲ್ಲೇ ಐಹಿಕ ದೃಷ್ಟಿಕೋನದಿಂದಲೂ ವಿಚಾರ ಮಾಡಬೇಕಿದೆ. ಅದೇ ರೀತಿ ತಾತ್ವಿಕ ದೃಷ್ಟಿಕೋನದ ವೈಚಾರಿಕತೆಯ ಅಗತ್ಯವೂ ಇದೆ. ಯಾವುದೇ ದೃಷ್ಟಿಕೋನದಿಂದ ಧರ್ಮಾಂತರದ ಬಗ್ಗೆ ಚಿಂತನೆ ಮಾಡಿದರೂ ಮೊದಲಿಗೆ ಅಸ್ಪೃಶ್ಯತೆ ಅಂದರೆ ಏನು. ಅದರ ನಿಜವಾದ ಸ್ವರೂಪ ಏನು ಎನ್ನುವುದನ್ನು ಸಮಗ್ರವಾಗಿ ತಿಳಿದುಕೊಳ್ಳುವುದು ಅತ್ಯಗತ್ಯವಾಗಿದ್ದು, ಇದು ಅರ್ಥವಾಗದೇ ನನ್ನ ಧರ್ಮಾಂತರದ ಘೋಷಣೆ ನಿಮಗೆ ಅರ್ಥವಾಗಲು ನಿಮಗೆ ಸಾಧ್ಯವೇ ಇಲ್ಲ. ಅಸ್ಪೃಶ್ಯತೆಯತೆ ಅಂದರೆ ಏನು ಅದರ ನಿಜವಾದ ಸ್ವರೂಪ ಅರ್ಥವಾಗಲು ನಾನು ಮೊದಲು ನಿಮ್ಮ ಮೇಲೆ ನಡೆಯುತ್ತಿರುವ ಶೋಷಣೆಗಳ ಕಥೆಯನ್ನು ನೆನಪಿಸಬೇಕಾದ ಅಗತ್ಯವಿದೆ. ಸರ್ಕಾರಿ ಶಾಲೆಯಲ್ಲಿ ಮಕ್ಕಳನ್ನು ಸೇರಿಸುವ ಹಕ್ಕುಗಳ ಬಗ್ಗೆ ಹೇಳಿದ್ದಕ್ಕೆ, ಬಾವಿಯಲ್ಲಿನ ನೀರು ತೆಗೆದುಕೊಳ್ಳುವ ಹಕ್ಕು ಇದೆ ಎಂದು ಹೇಳಿದ್ದಕ್ಕೆ, ಕುದುರೆ ಮೇಲೆ ಕೂಡ್ರುವ ಹಕ್ಕು ಇದೆ ಎಂದು ಹೇಳಿದ್ದಕ್ಕೆ ಸ್ಪೃಶ್ಯ ಹಿಂದೂಗಳಿಂದ ಹಲ್ಲೆಗೆ ಒಳಗಾಗುವ ಘಟನೆಗಳು ಯಾವಾಗಲೂ ನಡೆಯುತ್ತಿರುವ ಕಾರಣ ಅಂತಹ ಘಟನೆಗಳು ಎಲ್ಲರ ಮನಸ್ಸಿನಲ್ಲಿ ಇದ್ದೇ ಇರುತ್ತದೆ. ಆದರೆ ಹಲ್ಲೆ ಮಾಡುವುದಕ್ಕೆ ಇಂತಹ ಅನೇಕ ಕಾರಣಗಳಿದ್ದು, ಅವುಗಳನ್ನು ಭಾರತ ಬಿಟ್ಟು ಬೇರೆ ದೇಶದ ಜನರಿಗೆ ಹೇಳಿದರೆ ಅವರಿಗೆ ಅಚ್ಚರಿಯಾಗುತ್ತದೆ. ಉತ್ತಮ ಬಟ್ಟೆ ಧರಿಸಿದ್ದಕ್ಕೆ ಹಲ್ಲೆ ಮಾಡಿರುವ ಉದಾಹರಣೆ ಇದೆ. ನೀರು ತರುವುದಕ್ಕೆ ಹಿತ್ತಾಳೆ–ತಾಮ್ರದ ಪಾತ್ರೆ ಉಪಯೋಗಿಸಿದರು ಎಂದು ಹಲ್ಲೆ ಮಾಡಿದ ಉದಾಹರಣೆಯೂ ಇದೆ. ಆಭರಣ ಹಾಕಿಕೊಂಡಿದ್ದಕ್ಕೆ ಮಾಡಿರುವ ಹಲ್ಲೆಯ ಉದಾಹರಣೆ ನೀಡಬಹುದು. ಜನಿವಾರ ಹಾಕಿದ್ದಕ್ಕೆ ಹಲ್ಲೆ ಮಾಡಿದ ಉದಾಹರಣೆ ಇದೆ. ಸತ್ತ ಜಾನುವಾರುಗಳನ್ನು ತೆಗೆದುಕೊಂಡು ಹೋಗದ್ದಕ್ಕೆ, ಸತ್ತ ಪ್ರಾಣಿಯ ಮಾಂಸ ತಿನ್ನದ್ದಕ್ಕೆ ಮಾಡಿದ ಹಲ್ಲೆಯ ಉದಾಹರಣೆ ನೀಡಬಹುದು. ಕಾಲಿಗೆ ಬೂಟು ಅಥವಾ ಚಪ್ಪಲಿ ಹಾಕಿಕೊಂಡು ಗ್ರಾಮದಲ್ಲಿ ಹೋಗುತ್ತಿದ್ದ ವೇಳೆ ಎದುರಿಗೆ ಬಂದ ಸ್ಪೃಶ್ಯ ಹಿಂದೂವಿಗೆ ಸಲಾಮು ಹಾಕಿದ್ದಕ್ಕೆ ಹೊಡೆದ ಉದಾಹರಣೆ ನೀಡಬಹುದು. ಶೌಚಕ್ಕೆ ತಂಬಿಗೆಯಲ್ಲಿ ನೀರು ತೆಗೆದುಕೊಂಡ ಕಾರಣಕ್ಕೆ ಹಲ್ಲೆ ಮಾಡಿದ ಉದಾಹರಣೆ ನೀಡಬಹುದು. ಪಂಚರ ಪಂಕ್ತಿಯಲ್ಲಿ ಚಪಾತಿ ಬಡಿಸಿದ್ದಕ್ಕೆ ಹಲ್ಲೆ ಮಾಡಿದ ಇತ್ತೀಚಿನ ಘಟನೆಯನ್ನೂ ಉದಾಹರಣೆಯಾಗಿ ನೀಡಬಹುದು. ಈ ಮೇಲಿನ ಪ್ರಕಾರ ಶೋಷಣೆ, ಅಪರಾಧಗಳು ನಿಮ್ಮಲ್ಲಿ ಕುಳಿತಿರುವ ಯಾರಿಗಾದರೂ ಅನುಭವಕ್ಕೆ ಬಂದಿರಬಹುದು. ಗೋಮಾಳದಲ್ಲಿ ನಿಮ್ಮ ಜಾನುವಾರುಗಳು ಹೋಗದಂತೆ ತಡೆಯುವುದು. ಇಲ್ಲವೇ ನಿಮಗೆ ಊರಿನಲ್ಲಿ ಹೆಜ್ಜೆ ಇಡದಂತೆ ಪ್ರತಿಬಂಧಿಸುವುದು ಇತ್ಯಾದಿ ಭಹಿಷ್ಕಾರಗಳನ್ನು ಕಾಣಬಹುದು".[11] ಎಂದು ವಿಷಯ ತಿಳಿಸಿದರು.

ಧರ್ಮಾಂತರವನ್ನು ಮಾಡಿದರೆ ಅದು ಪರಿಪೂರ್ಣವಾಗುವುದಿಲ್ಲ. ಧರ್ಮಾಂತರಕ್ಕೆ ರಾಜಕೀಯ ಅಧಿಕಾರದ ಮಹತ್ವವನ್ನು ವಿವರಿಸಿ ಹೇಳಿದರು. ಪತ್ರಿಕಾ ಬಾತ್ಮೀದಾರರು ನೀವು ಬೌದ್ಧ ಧಮ್ಮವನ್ನು ಏಕೆ ಸ್ವೀಕಾರ ಮಾಡುತ್ತಿದ್ದೀರಿ ಎಂದು ಕೇಳಿದರು. ಆಗ ಅಂಬೇಡ್ಕರ್‌ರವರು ಮಾತನಾಡುತ್ತಾ "ಹಿಂದೂ ಧರ್ಮವು ವರ್ಣಾಶ್ರಮ ಪದ್ಧತಿಯ ತಳಹದಿಯ ಮೇಲೆ ನಿಂತಿದೆ. ಇದರಿಂದ ಅಸ್ಪೃಶ್ಯತೆ ವ್ಯಾಪಕವಾಗಿ ಹರಡಿದೆ. "ಅಸ್ಪೃಶ್ಯತೆಯ ಬೇರು ಜಾತಿ ವ್ಯವಸ್ಥೆಯಲ್ಲಿದೆ, ಜಾತಿ ವ್ಯವಸ್ಥೆಯ ಬೇರು ವರ್ಣಾಶ್ರಮದಲ್ಲಿದೆ, ವರ್ಣಾಶ್ರಮದ ಬೇರು ಬ್ರಾಹ್ಮಣವಾದದಲ್ಲಿದೆ. ಬ್ರಾಹ್ಮಣವಾದದ ಬೇರು ರಾಜಕೀಯ ಅಧಿಕಾರದಲ್ಲಿದೆ. ರಾಜಕೀಯ ಅಧಿಕಾರವು ಬ್ರಾಹ್ಮಣರ ಕೈಯಲ್ಲಿದೆ". ನಾವು ಬ್ರಾಹ್ಮಣರಿಂದ ಮುಕ್ತರಾಗಿ ಸ್ವಾಭಿಮಾನ ಬದುಕನ್ನು ಮಾಡಲು, ಸಹಬಾಳ್ವೆ ನಡೆಸಲು, ರಾಜಕೀಯ

ಅಧಿಕಾರ ಪಡೆಯಲು, ಅಸಮಾನತೆಯನ್ನು ತೊಡೆದು ಹಾಕಲು, ಅಸ್ಪೃಶ್ಯರಲ್ಲಿ ಒಗ್ಗಟ್ಟು ಮೂಡಿಸಲು, ಸಮ ಸಮಾಜವನ್ನು ನಿರ್ಮಿಸಲು, ಮಾನವೀಯ ಮೌಲ್ಯಗಳನ್ನು ಬೆಳೆಸಲು, ಸಾಮಾಜಿಕ ನ್ಯಾಯಕ್ಕಾಗಿ, ಬಹುಜನರ ಹಿತಕ್ಕಾಗಿ ಮತ್ತು ಹಿಂದೂ ಧರ್ಮದ ಧಾರ್ಮಿಕ ದಬ್ಬಾಳಿಕೆಯನ್ನು ಪ್ರತಿಬಂಧಿಸಲು ಮತಾಂತರವಾಗುತ್ತಿರುವುದಾಗಿ, ಅಲ್ಲದೆ ಬೌದ್ಧ ಧಮ್ಮವು ಭಾರತದ ಸಭ್ಯತೆಯ ಪ್ರತೀಕವಾದ ಅಂಗವಾದ ಪ್ರಯುಕ್ತ ನಾನು ಬೌದ್ಧ ಧಮ್ಮವನ್ನು ಸ್ವೀಕರಿಸುತಿದ್ದೇನೆ. "ತಥಾಗತ ಗೌತಮ ಬುದ್ಧರು ಮಾರ್ಗದಾತರೇ, ವಿನಃ ಮುಕ್ತಿದಾತರಲ್ಲ" ನನಗೆ ಗೊತ್ತಿದೆ. ಒಂದು ದಿವಸ ಭಾರತವು ಬೌದ್ಧ ಭಾರತವಾಗುತ್ತದೆ. ಆಗ ಬ್ರಾಹ್ಮಣರು ಕೂಡಾ ನಮಗೆ 'ಯುದ್ಧ(ಗೀತೆ) ಬೇಡ, ನಮಗೆ ಬುದ್ದ ಬೇಕು' ಎಂಬುವುದು ಮನವರಿಕೆಯಾಗಿ ಅವರೂ ಕೂಡಾ ಬೌದ್ಧ ಧಮ್ಮವನ್ನು ಸ್ವಿಕಾರ ಮಾಡುತ್ತಾರೆ. ಆ ಕಾಲ ಬಂದೇ ಬರುತ್ತದೆ[12] ಎಂದು ನುಡಿದರು.

ಬುದ್ಧನ ಧರ್ಮವನ್ನು ಪ್ರಶ್ನಿಸಿಯೇ ಒಪ್ಪಿಕೊಂಡರು. ಹೀನಯಾನ, ವಜ್ರಯಾನ, ಮಹಾಯಾನ, ತೇರಾವಾದ ಮುಂತಾದ ಬೌದ್ಧಧರ್ಮದ ಹಲವಾರು ಶಾಖೆಗಳ ಜಟಿಲ ಬೋಧನೆಗಳ ನಡುವೆ ಜನ ಗೊಂದಲಗೊಳ್ಳದೆ ಇರಲಿ ಎಂದು ಬೌದ್ಧ ಧರ್ಮದ ಉತ್ತಮ ವೈಜ್ಞಾನಿಕ ಅಂಶಗಳನ್ನು ಸರಳವಾಗಿ ಪ್ರಸ್ತುತಪಡಿಸುವ 'ನವಯಾನ' ಎಂಬ ಹೊಸಪಂಥವನ್ನೇ ಶುರುಮಾಡಿದರು.[13]

1956 ಮೇ ತಿಂಗಳಲ್ಲಿ ಲಂಡನ್ನಿನ ಬ್ರಿಟಿಷ್ ಬ್ರಾಡ್–ಕಾಸ್ಟಿಂಗ್ ಕಾರ್ಪೋರೇಷನ್ನಿನವರು (ಬಿಬಿಸಿ)ಅಂಬೇಡ್ಕರ್‌ರ "ನಾನು ಬೌದ್ಧಮತವನ್ನೇಕೆ ಪ್ರೀತಿಸುತ್ತೇನೆ ಮತ್ತು ಸದ್ಯದ ಪರಿಸ್ಥಿತಿಯಲ್ಲಿ ಜಗತ್ತಿಗೆ ಅದು ಹೇಗೆ ಪ್ರಯೋಜನಕಾರಿಯಾಗಿದೆ" ಎಂಬ ಭಾಷಣವನ್ನು ಬಿತ್ತರಿಸಿದರು. "ನಾನು ಬೌದ್ಧ ಮತಕ್ಕೇಕೆ ಪ್ರಾಮುಖ್ಯತೆಯನ್ನು ಕೊಡುತ್ತೇನೆಂದರೆ, ಇನ್ನಾವ ಮತದಲ್ಲೂ ಇಲ್ಲದ ಮೂರು ತತ್ವಗಳ ಜೋಡಣೆಯು ಅದರಲ್ಲಿರುವುದರಿಂದ. ಬೌದ್ಧಮತವು ಪ್ರಜ್ಞಾ (Understanding as against Superstition and supernaturalism), ಕರುಣೆ (Love) ಮತ್ತು ಸಮತೆ (Equality)ಯನ್ನು ಪದೇಶಿಸುತ್ತದೆ. ಮಾನವನ ಒಳ್ಳೆಯ ಮತ್ತು ಸುಖ ಜೀವನಕ್ಕೆ ಇವೇ ಬೇಕಾದವು. ದೇವರಾಗಲಿ ಅತ್ಮವಾಗಲಿ ಸಮಾಜವನ್ನು ರಕ್ಷಿಸುವುದಿಲ್ಲ"[14] ಎಂದು ಹೇಳಿದರು.

ನಮ್ಮ ಧರ್ಮಾಂತರದ ಅಪಮಾನ ಎಲ್ಲೆಡೆ ನಡೆಯುತ್ತಿದೆ. ಆದರೂ ಧರ್ಮಾಂತರದ ಉದ್ದೇಶದಿಂದ ಎಳ್ಳಷ್ಟು ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಇಳಿದಿದ್ದು ಧರ್ಮಾಂತರವಾಗುವವರ ಕುರಿತು ಯಾರಾದರೂ ಪ್ರಶಂಸೆ ಮಾಡಿದ್ದರ ಬಗ್ಗೆ ನಮ್ಮ ಹಿಂದೂಸ್ಥಾನದಲ್ಲಿಯಂತು ಕಣ್ಣಿಗೆ ಬಿದ್ದಿಲ್ಲ. ಪ್ರಪಂಚದಲ್ಲಿ ಲಭ್ಯವಿದ್ದ ಪ್ರಮುಖ ಧರ್ಮಗಳ ಆಳ ಅಧ್ಯಯನವನ್ನು ಆಧ್ಯಾತ್ಮಕ ದೃಷ್ಟಿಯಿಂದ ಮಾಡಿದ್ದೇನೆ. ಅವೆಲ್ಲವುಗಳಲ್ಲಿ ನನ್ನೆದುರು ಕೇವಲ ಇಬ್ಬರು ವ್ಯಕ್ತಿಗಳು ಮಾತ್ರ ನಿಲ್ಲುತ್ತಾರೆ. ಒಬ್ಬ ಬುದ್ಧ ಮತ್ತು ಇನ್ನೊಬ್ಬ ಯೇಸು. ಮನುಷ್ಯರೊಟ್ಟಿಗೆ ಮನುಷ್ಯರ ನಡುವಿನ ಕರ್ತವ್ಯವೇನು, ಮಾನವನ ದೇವರ ಜೊತೆಗಿನ ಕರ್ತವ್ಯ ಯಾವುದು, ಮಗ ತಂದೆಯ ಜೊತೆಗೆ ಹೇಗೆ ವರ್ತಿಸಬೇಕು, ಮಾನವರೆಲ್ಲರಲ್ಲಿ ಸಮತೆ, ಸ್ವಾತಂತ್ರ್ಯವನ್ನು ಅನುಭವಿಸುವ ಧರ್ಮವೂ ಯಾವುದೋ ಅದು ನನಗೆ ಮತ್ತು ನನ್ನ ಅನುಯಾಯಿಗಳಿಗೆ ಬೇಕು. ಮಿಶನರಿಗಳು ಧರ್ಮಾಂತರ ಮಾಡಿದರೆ ಮುಗಿಯಿತು, ನಮ್ಮ ಕಾರ್ಯ ಮುಗಿಯಿತು ಎಂದು ಭಾವಿಸಿದ್ದಾರೆ. ಆದರೆ ಅವರ ರಾಜಕೀಯ ಅಧಿಕಾರದ ಸವಲತ್ತುಗಳನ್ನು ಗಮನಿಸುವುದಿಲ್ಲ. ನನಗೆ ಎಷ್ಟು ತೀವ್ರವಾಗಿ ತೊಡಗಿಸಿಕೊಳ್ಳಬೇಕಿತ್ತೋ ಅಷ್ಟು ತೊಡಗಿಕೊಂಡಿಲ್ಲ. ಯಾವುದೇ ಸಂಸ್ಥೆ ರಾಜಕೀಯ ಆಧಾರವಿಲ್ಲದೆ ಉಳಿಯುವುದು ಕಷ್ಟ. ನೀವು ಅಸ್ಪೃಶ್ಯರಾಗಿದ್ದೀರಿ, ನೀವು ಧರ್ಮಾಂತರಗೊಂಡರೆ ಸರ್ಕಾರದಿಂದ ನಿಮಗೆ ದೊರೆತಿರುವ ಸೌಲಭ್ಯಗಳು ಕ್ರಿಶ್ಚಿಯನ್ನರ ಸಂದರ್ಭದಲ್ಲಿ ದೊರೆಯುವುದಿಲ್ಲ. ಹಾಗಾಗಿ ಧರ್ಮಾಂತರಕ್ಕಿಂತ ರಾಜಕಾರಣದಲ್ಲಿ ತೊಡಗಿಸಿಕೊಂಡು ಅಸೆಂಬ್ಲಿಯಲ್ಲಿ ಸ್ಥಳಗಳನ್ನು ಪಡೆಯಿರಿ.[15] ಎಂದು ಮಾರ್ಗದರ್ಶನ ನೀಡಿದರು.

1956ರ ಅಕ್ಟೊಬರ್ 14ರಂದು ಸಾಮ್ರಾಟ್ ಅಶೋಕನು ಧಮ್ಮದೀಕ್ಷೆ ಪಡೆದ 'ವಿಜಯದಶಮಿ' ದಿನವೇ ನಾಗಪುರದಲ್ಲಿ ಬೌದ್ಧ ಧಮ್ಮ ದೀಕ್ಷಾ ಕಾರ್ಯಕ್ರಮವು ನಡೆಯಿತು. ದೀಕ್ಷಾ ಕಾರ್ಯಕ್ರಮಕ್ಕೆ ಸಾಕ್ಷೀಕರಿಸಿದ ಪೂಜ್ಯ ಬಿಕ್ಕು ಸಂಘ ಭಂತೆಜಿಗಳು ಹಾಜರಿದ್ದರು. ಇಮದುತಾಯಿ ವರಾಳೆ ಅವರ ಸುಶ್ರಾವ್ಯ ಧ್ವನಿಯಲ್ಲಿ ಅಂಬೇಡ್ಕರ್ ಅವರ ತಂದೆ ರಾಮಜೀ ಸಕ್ಪಾಲರವರ ಕುರಿತು ಬರೆದ ಒಂದು ಮರಾಠಿ ಪ್ರಾರ್ಥನಾ ಗೀತೆಯೊಂದಿಗೆ ಐದು ಲಕ್ಷ ಜನರ ಮಧ್ಯದಲ್ಲಿ ಅಂಬೇಡ್ಕರ್ ಮತ್ತು ಸವಿತಾ ಅಂಬೇಡ್ಕರ್‌ರವರಿಗೆ 'ಕುಶಿನಾರ' ಬೌದ್ದ ವಿಹಾರದಲ್ಲಿರುವ ಭಾರತದ ಹಿರಿಯ ಬೌದ್ಧ ಬಿಕ್ಕು ಮಹಾಥೇರೋ 'ಚಂದ್ರಮಣಿ ಭಂತೆ'ಯವರು ಬೌದ್ಧ ಧಮ್ಮದ ತ್ರಿಸರಣ ಮತ್ತು ಪಂಚಶೀಲಗಳನ್ನು ಭೋದಿಸಿದರು. ಅಂಬೇಡ್ಕರ್ ಮತ್ತು ಸವಿತಾ ಅಂಬೇಡ್ಕರ್ ಅವರು ತಥಾಗತ ಗೌತಮ ಬುದ್ಧರ ಸನ್ನಿದಾನಕ್ಕೆ ಪುಷ್ಪಗಳನ್ನು ಸಮರ್ಪಿಸಿದರು. 1956ರ ಅಕ್ಟೋಬರ್ 15ನೇ ಸೋಮುವಾರದಂದು ಅಂಬೇಡ್ಕರ್‌ರವರು ಸುಮಾರು ಒಂದು ಲಕ್ಷ ತಮ್ಮ ಅನುಯಾಯಿಗಳಿಗೆ ಧಮ್ಮ ದೀಕ್ಷೆಯನ್ನು ಕೊಟ್ಟರು. ದೀಕ್ಷೆ ಪಡೆದ ಅನುಯಾಯಿಗಳಿಗೆ ತವೇ ಸಿದ್ಧಗೊಳಿಸಿದ 22 ಪ್ರತಿಜ್ಞಗಳನ್ನು ಬೋಧಿಸಿದರು.[16]

ಅಂಬೇಡ್ಕರ್ ಅವರು ಬೌದ್ಧ ಮತಕ್ಕೆ ಧರ್ಮಾಂತರಗೊಂಡ ನಂತರ ಪ್ರಪಂಚದ ಹಲವು ಬೌದ್ಧ ಸಂಘಟನೆಗಳು ಅಂಬೇಡ್ಕರ್ ಅವರನ್ನು ಸನ್ಮಾನ ಮತ್ತು ಭಾಷಣಕ್ಕೆ ಆಹ್ವಾನಿಸಿದ್ದರು. ಡಾ. ಅಂಬೇಡ್ಕರ್ ಅವರು ಚಾತುರ್ವರ್ಣ್ಯ, ದಲಿತ, ಅಸ್ಪೃಶ್ಯತೆ ಮತ್ತು ಶೋಷಣೆಯ ಪ್ರತೀಕವಾಗಿದ್ದ ಹಿಂದೂ ಧರ್ಮವನ್ನು ದಿಕ್ಕರಿಸಿ ಬೌದ್ಧ ಧರ್ಮ ಸ್ವೀಕರಿಸಿರುವುದು ಭಾರತದ ಇತಿಹಾಸದಲ್ಲಿ ಒಂದು ಕ್ರಾಂತಿಕಾರಕ ಘಟನೆಯಾಗಿದೆ.

**ಅಡಿಟಿಪ್ಪಣಿಗಳು**


1. ಅಮ್ಮಸಂದ್ರ ಸುರೇಶ್. ಡಾ (2022)–"ಮಹಾ ಮಾನವತಾವಾದಿ" ವಂಶಿ ಪಬ್ಲಿಕೇಶನ್, ಬೆಂಗಳೂರು. ಪುಟ 152.
2. ಮರುಳಸಿದ್ಧಪ್ಪ. ಕೆ. ಡಾ. (2018)–"ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು". ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಸಂಪುಟ 18. ಪುಟ 333–337.
3. ಅಂಬೇಡ್ಕರ್ ಬರಹ ಭಾಷಣಗಳು. ಸಂಪುಟ 17. ಪುಟ 214.
4. ಮರುಳಸಿದ್ಧಪ್ಪ. ಕೆ. ಡಾ........ 'ಪೂರ್ವೋಕ್ತ'.......... ಸಂಪುಟ 17. ಪುಟ 215.
5. ಅದೇ................ ಸಂಪುಟ 4. ಪುಟ 413–14.
6. ಅದೇ................ ಸಂಪುಟ 4. ಪುಟ 422.
7. ಅದೇ................ ಸಂಪುಟ 4 ಪುಟ 423–24.
8. ಅದೇ................ ಸಂಪುಟ 4. ಪುಟ 428.
9. ಅದೇ................ ಸಂಪುಟ 17. ಪುಟ 217–219.
10. ಅದೇ................ ಸಂಪುಟ 19. ಪುಟ 457.
11. ಅದೇ................ ಸಂಪುಟ 19. ಪುಟ 442–43.
12. ವಿಠ್ಠಲ ವಗ್ಗನ್(2022)–"ಮರೆಯದ ಮಾಣಿಕ್ಯ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್", ಶ್ರೀನಿಧಿ–ಸುಪ್ರೀತ್ ಪ್ರಕಾಶನ, ಕಲಬುರಗಿ. ಪುಟ 264.
13. ಅನುಪಮಾ. ಎಚ್. ಎಸ್. ಡಾ(2018)–"ವಿಮೋಚಕನ ಹೆಜ್ಜೆಗಳು–ಡಾ. ಬಿ. ಆರ್. ಅಂಬೇಡ್ಕರ್ ಬದುಕು ಸಾಧನೆ". ಲಡಾಯಿ ಪ್ರಕಾಶನ. ಗದಗ. ಪುಟ 238.
14. ಧನಂಜಯ್ ಕೀರ್(ಇಂಗ್ಲಿಷ್ ಮೂಲ) ಡಿ. ಕೆ. ಕುಮಾರಯ್ಯ(ಕನ್ನಡ ಅನುವಾದ)(2022)–"ಡಾ. ಬಾಬಾಸಾಹೇಬ್ ಅಂಬೇಡ್ಕರ್–ಜೀವನ ಮತ್ತು ಜೀವನ ಧ್ಯೇಯ", ಗೋಕುಲ ಪ್ರಕಾಶನ. ಹಾಸನ. ಪುಟ 544.
15. ಮರುಳಸಿದ್ಧಪ್ಪ. ಕೆ. ಡಾ........ 'ಪೂರ್ವೋಕ್ತ'.......... ಸಂಪುಟ 19. ಪುಟ 572.
16. ವಿಠ್ಠಲ ವಗ್ಗನ್(2022)–"ಮರೆಯದ ಮಾಣಿಕ್ಯ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್" ಶ್ರೀನಿಧಿ–ಸುಪ್ರೀತ್ ಪ್ರಕಾಶನ, ಕಲಬುರಗಿ, ಪುಟ 263, 265–266.